# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 340 |
| ಸದಸ್ಯರ ಹೆಸರು | ಡಾ.ಧನಂಜಯ ಸರ್ಜಿ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 10-03-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಆಯುಷ್ಮಾನ್ ಭಾರತ್ ಮತ್ತು ಇ.ಎಸ್.ಐ. ಯೋಜನೆಗಳ ಎಂಪನೆಲ್ ಆಗಿರುವ ಖಾಸಗಿ ಆಸ್ಪತ್ರೆಗಳ ಸಂಖ್ಯೆ ಎಷ್ಟು | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನಾ-ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ ಪ್ರಸ್ತುತ 592 ಖಾಸಗಿ ಆಸ್ಪತ್ರೆಗಳು ಹಾಗೂ ಇ.ಎಸ್.ಐ. ಯೋಜನೆಯಡಿ 143 ಆಸ್ಪತ್ರೆಗಳು ಎಂಪ್ಯಾನಲ್ ಆಗಿರುತ್ತವೆ. |
| ಆ | ಖಾಸಗಿ ಆಸ್ಪತ್ರೆಗಳಿಗೆ ಪ್ರಸ್ತುತ ಫೈರ್ ಪರ್ಮಿಷನ್ ತೆಗೆದುಕೊಳ್ಳಲು ಇರುವ ಮಾನದಂಡಗಳೇನು; | ನೋಂದಣಿ ಪಡೆಯಲು ಇರುವ ಮಾನದಂಡಗಳ ಪೈಕಿ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಕಟ್ಟಡದ ಎತ್ತರಕ್ಕೆ ಅನುಗುಣವಾಗಿ ಪಡೆಯಬೇಕಾಗಿರುವ ಪ್ರಮಾಣ ಪತ್ರ ಸಲ್ಲಿಸುವುದು ಒಂದು ಮುಖ್ಯ ಮಾನದಂಡವಾಗಿದೆ.<br>ಈ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಆಯುಕ್ತಾಲಯದಿಂದ ದಿನಾಂಕ: 15.10.2024 ರಲ್ಲಿ ಸುತ್ತೋಲೆ ಹೊರಡಿಸಲಾಗಿದೆ.<br>1. 21 ಮೀಟರ್‌ಗಿಂತ ಎತ್ತರವಿರುವ ಆಸ್ಪತ್ರೆ ಕಟ್ಟಡಗಳು ರಾಷ್ಟ್ರೀಯ ಕಟ್ಟಡದ ಸಂಹಿತೆಯಂತೆ ಕಡ್ಡಾಯವಾಗಿ ಅಗ್ನಿಶಾಮಕ ಇಲಾಖೆಯಿಂದ ನಿರಾಪೇಕ್ಷಣಾ/ ಕ್ಲಿಯರೆನ್ಸ್ ಪತ್ರವನ್ನು ಪಡೆಯಬೇಕು<br>2. 21 ಮೀಟರ್‌ಗಿಂತ ಕಡಿಮೆ ಎತ್ತರವಿರುವ ಆಸ್ಪತ್ರೆ ಕಟ್ಟಡಗಳು ಅಗ್ನಿಶಾಮಕ ಇಲಾಖೆಯಿಂದ ಸಲಹಾ/ಸಮಾಪನಾ ಪತ್ರವನ್ನು ಪಡೆಯಬೇಕು.<br>ಇ.ಎಸ್.ಐ.ಯೋಜನೆಗಳ ಎಂಪನೆಲ್ಡ್ ಆಗಿರುವ ಖಾಸಗಿ ಆಸ್ಪತ್ರೆಗಳಿಗೆ ಫೈರ್ ಪರ್ಮಿಷನ್ ತೆಗೆದುಕೊಳ್ಳಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿರುತ್ತದೆ. |
| ಇ | ಹಲವಾರು ವರ್ಷಗಳಿಂದ ಆಯುಷ್ಮಾನ್ ಭಾರತ್ ಮತ್ತು ಇ.ಎಸ್.ಐ. ಯೋಜನೆಗಳ ಎಂಪನೆಲ್ ಆಗಿರುವ ಖಾಸಗಿ ಆಸ್ಪತ್ರೆಗಳು ಎಂಪನೆಲ್ ನವೀಕರಣದ ಸಂದರ್ಭದಲ್ಲಿ ಫೈರ್ ಪರ್ಮಿಷನ್ ಕಡ್ಡಾಯಗೊಳಿಸಿರುವುದರಿಂದ ತೊಂದರೆಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಬಂದಿದೆ.<br>ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನಾ-ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ" ಯೋಜನೆಯ ಸರ್ಕಾರಿ ಆದೇಶ ಸಂಖ್ಯೆ: ಆಕುಕ 69 ಸಿಜಿಇ 2018, ದಿನಾಂಕ:15.11.2018 ರ ಅನುಬಂಧ-06 ರನ್ವಯ ಖಾಸಗಿ ಆಸ್ಪತ್ರೆಗಳ ನೊಂದಾವಣಿಗೆ ಸೂಕ್ತ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸುವುದು ಕಡ್ಡಾಯವಾಗಿರುತ್ತದೆ.<br>ರಾಜ್ಯದ ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಅಗ್ನಿ ಅವಗಡಗಳು ಸಂಭವಿಸದಂತೆ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಅತ್ಯವಶ್ಯಕವಾಗಿದ್ದು, ಈ ಬಗ್ಗೆ ಕರ್ನಾಟಕ ರಾಜ್ಯ ಅಗ್ನಿಶಾಮಕ ಇಲಾಖೆಯು ಅಗ್ನಿ ಅವಘಡಗಳು ಸಂಭವಿಸದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಕೋರಿರುವ ಹಿನ್ನೆಲೆಯಲ್ಲಿ ಪತ್ರ ಸಂಖ್ಯೆ: JDM/KPME/11/2024-25, ದಿನಾಂಕ:15.10.2024 ಹೊರಡಿಸಲಾಗಿದ್ದು, ಅದರನ್ವಯ ಅಗ್ನಿ ಸುರಕ್ಷತಾ ಪ್ರಮಾಣ ಪತ್ರವನ್ನು ಖಾಸಗಿ ಆಸ್ಪತ್ರೆಗಳಿಂದ |

| | | |
|---|---|---|
| | | ಕಡ್ಡಾಯವಾಗಿ ಎಂಪೆನೆಲ್‌ಮೆಂಟ್ ನವೀಕರಣ ಸಮಯದಲ್ಲಿ ಪಡೆಯಲಾಗುತ್ತಿದೆ. ಸದರಿ ಪತ್ರದೊಂದಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವತಿಯಿಂದ ಸುತ್ತೋಲೆಯನ್ನು ದಿನಾಂಕ: 23.12.2024 ರಂದು ಈಗಾಗಲೇ ಖಾಸಗಿ ಆಸ್ಪತ್ರೆಗಳೂ ಸೇರಿದಂತೆ ಎಲ್ಲಾ ಆಸ್ಪತ್ರೆಗಳಿಗೆ ಕಳುಹಿಸಲಾಗಿದೆ (ಅನುಬಂಧದಲ್ಲಿ ಲಗತ್ತಿಸಿದೆ).<br><br>ಆದ್ದರಿಂದ ಎಂಪ್ಯಾನಲ್‌ಮೆಂಟ್ ನವೀಕರಣ ಸಂದರ್ಭದಲ್ಲಿ ಫೈರ್ ಪರ್ಮಿಷನ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಹಾಗಾಗಿ ಸದರಿ ನಿಯಮದಲ್ಲಿ ಯಾವುದೇ ಸಡಿಲಿಕೆ ನೀಡಲು ಸಾಧ್ಯವಿರುವುದಿಲ್ಲ. |
| ಈ | ಆಸ್ಪತ್ರೆಗಳಲ್ಲಿ ಫೈರ್ ಪರ್ಮಿಷನ್ ಕಡ್ಡಾಯಗೊಳಿಸಿರುವುದರಿಂದ ಮಾನದಂಡಗಳನ್ವಯ ಖಾಸಗಿ ಆಸ್ಪತ್ರೆ ಮತ್ತು ಸರ್ಕಾರಿ ಆಸ್ಪತ್ರೆಗಳಿಗೆ ವ್ಯತ್ಯಾಸವೇನಾದರು ಇದೆಯೇ? | ಕೆಪಿಎಂಇ ಮಾನದಂಡಗಳನ್ವಯ ಖಾಸಗಿ ಆಸ್ಪತ್ರೆ ಮತ್ತು ಸರ್ಕಾರಿ ಆಸ್ಪತ್ರೆಗಳಿಗೆ ವ್ಯತ್ಯಾಸವೇನು ಇರುವುದಿಲ್ಲ.<br><br>ಸರ್ಕಾರಿ ಎಲ್ಲಾ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿಯೂ NBC 2016 ರ ನಿಯಮಾನುಸಾರ ಆಸ್ಪತ್ರೆಗಳಲ್ಲಿ ಫೈರ್ ಪರ್ಮಿಷನ್ ಪಡೆಯುವುದು ಕಡ್ಡಾಯವಾಗಿರುತ್ತದೆ. |

**ಆಕುಕ 10 ಎಸ್‌ಬಿವಿ 2025**

**(ದಿನೇಶ್ ಗುಂಡೂರಾವ್ )**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Annexure 3


# Government of Karnataka
# SUVARNA AROGYA SURAKSHA TRUST

(Department of Health & Family Welfare)

*7th floor Arogya Soudha Magadi Road Bengaluru - 560023*

*Phone: 080-22536200 Fax: 080-22536221 E-mail:* directorsast@gmail.com


No. HFW/SAST/MM-2. /2023-24 Date: 20.12.2024

## CIRCULAR

**Sub:** Mandatory documents, statutory certificates and licenses to be submitted during inspection for renewal empanelment of the network hospital

**Ref:** Annexure – 06 of GO- HFW 69 CGE 2018 dated: 15.11.2018

*****

It is hereby instructed to submit the following mandatory statutory certificates and licenses to be submitted during inspection for renewal empanement of the network hospital.

1. Valid KPME registration certificate with level of hospital appropriate for the specialities to be renewed along with validity period mentioned.
2. Valid Pollution Control Board Certificate with appropriate bed strength and validity period mentioned.
3. Valid AERB license of radiological equipments with validity period mentioned
4. Valid Fire NoC certificate/Compliance/Clearance/advisory certificate issued by the Fire Deparment, Government of Karnataka with validity period mentioned (As per letter no. JDM/KPME/11/2024-25, dated: 15.10.2024)
5. Valid Electrical safety licenses (issued by Government of Karnataka) lift license and DG set installation report.
6. NABH Entry or Full accreditation certification
7. Any MoU/Tieup agreements to be on bond paper with validity period and mutually agreed services and terms mentioned. Any tie-up for CVTS/Oncology facilities – MoU along with KMC certificate, appointment order, consent letter of the specialist in the tieup hospital to be submitted mandatorily.
8. All in-house specialists KMC certificate, appointment order, consent letter and form 16.
9. Anesthetist, Nurse and Paramedical staff details
10. Infection control committee meeting and mortality committee meeting proceedings (recent two year proceedings)
11. Valid invoice bills and installation reports of operating microscopes, lithotripsy machine, RIRS machine, C-ARM, ventillators, dialysis portals and all other necessary equipments.
12. Valid partnership deed/ownership document/Trust deed/limited company documents




le No. HFW/10/SBV/2025-HEALTH 2-HEALTH AND FAMILY WELFARE SEC (Computer No. 1699823)

[illegible]

13. Hospital bank account details/cancelled cheque copy and PAN card copy.

14. Any other relevant documents.

All relevant documents as per inspection checklist list to be submitted at the time of inspection.

Director (MM)
Suvarna Arogya Suraksha Trust,
Bengaluru
28/12

**To,**

1. All Network Hospitals, SAST
2. All Regional Consultants, Additional Regional Consultants, SAST and District Co-ordinators, SAST

**Copy to:**

1. Executive Director, SAST, Bengaluru
2. Director Finance/Operations, SAST, Bengaluru
3. Chief Vigilance Officer, SAST
4. Project Manager AB-ArK, SAST Bengaluru
5. Assistant Project Manager (1&2) SAST Bengaluru
6. Empanelment Co-ordinator, SAST
7. Office copy